ಕಂಡು ಬಂದಿದೆ. ಅಂಥಹ ಕೊಳವೆ ಬಾವಿಗಳ ಮುಂದೆ ನೀರು ಕುಡಿಯಲು ಯೋಗ್ಯವಲ್ಲವೆಂಬ ಫಲಕವನ್ನು ತೂಗು ಹಾಕುವ ಕ್ರಮ ಕೈಗೊಂಡಿದೆ.

ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರಿರುವ ಬಡಾವಣೆಗಳು

335 (563) ಶ್ರೀ ಎನ್. ರಾಜಣ್ಣ (ಭಾರತಿನಗರ) : ಮಾನ್ಯ ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

1) ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರಲ್ಪಟ್ಟ ಬಡಾವಣೆಗಳ ಸಂಖ್ಯೆ ಎಷ್ಟು?

2) ಈ ಬಡಾವಣೆಗಳಲ್ಲಿ ವಾಸ ಮಾಡುವ ಜನ ಸಂಖ್ಯೆ ಎಷ್ಟು?

3) ಈ ಹೊಸ ಬಡಾವಣೆಗಳಿಗೆ ಕುಡಿಯುವ ನೀರು ಸರಬರಾಜು ಮಾಡಲು ಬೆಂಗಳೂರು ಜಲಮಂಡಳಿಯು 60 ಕೋಟಿ ರೂ. ಯೋಜನೆ ತಯಾರಿಸಿದೆಯೇ?

4) ಹಾಗಿದ್ದಲ್ಲಿ ಈ ಯೋಜನೆಯ ಅನಷ್ಠಾನಕ್ಕೆ ಬೆಂಗಳೂರು ಮಹಾನಗರ ಪಾಲಿಕೆ ಹಣವನ್ನು ಬಿಡುಗಡೆ ಮಾಡಿದೆಯೇ?

ಶ್ರೀ ಅನಂತನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :

1) ಒಟ್ಟು 189 ಬಡಾವಣೆಗಳು ಸೇರಿವೆ

2) 1991ರ ಜನಗಣತಿಯ ಪ್ರಕಾರ ಒಟ್ಟು 13.5 ಲಕ್ಷಗಳಾಗಿದೆ.

3) ಬೆಂಗಳೂರು ಜಲಮಂಡಳಿಯನ್ನು ವಿವಿಧ ಪ್ರದೇಶಗಳ ಸರ್ವೆ ಕಾರ್ಯವನ್ನು ಒಳಚರಂಡಿ ಮತ್ತು ನೀರು ಸರಬರಾಜು ವ್ಯವಸ್ಥೆಯನ್ನು ಒದಗಿಸುವ ಸಲುವಾಗಿ ಕೈಗೆತ್ತಿಕೊಂಡಿದ್ದು ಸರ್ವೆ ಮುಗಿದ ಪ್ರದೇಶಗಳಲ್ಲಿ ಅಂದಾಜು ಪಟ್ಟಿಯನ್ನು ತಯಾರಿಸಿ ಹಂತ ಹಂತವಾಗಿ ಮಹಾನಗರ ಪಾಲಿಕೆಗೆ ಹಣವನ್ನು ಠೇವಣಿ ಇಡಲು ಮತ್ತು ಅಂದಾಜಿಗೆ ಮೇಲು ಸಹಿ ಮಾಡಲು ಕಳುಹಿಸಿಕೊಡಲಾಗುತ್ತಿದೆ. ಈವರೆಗೆ ಸುಮಾರು 13.71 ಕೋಟಿ ರೂ. ಗಳ ಅಂದಾಜು ಪಟ್ಟಿಯನ್ನು ಕಳುಹಿಸಿಕೊಡಲಾಗಿದೆ.

4) ಸುಮಾರು 1 ಕೋಟಿ ರೂಗಳ ಹಣವನ್ನು ಬಿಡುಗಡೆ ಮಾಡಿದೆ.

Acquisition of defence land at Murphy road.

336 (561) SRI. N. RAJANNA (Bharthinagar) : Will the Hon'ble Minister of State for Bangalore City Development be pleased to State

a) Whether the Bangalore Mahanagar palike has acquired the defence land at Murphy road, Bangalore?

b) Amount paid by the Bangalore Mahanagara Palike for this purpose?